ಪ್ರಜಾವಾಣಿ ಚಿತ್ರ



ಜಲ ಸಂರಕ್ಷಣಾ ದಿನಾಚರಣೆ ಅಂಗವಾಗಿ ಬುಧವಾರ ನಯನ ಸಭಾಂಗಣದಲ್ಲಿ ಸಿಡಿಎಲ್ ಸ್ವಯಂ ಸೇವಾ ಸಂಸ್ಥೆ ಹೊರತಂದ 'ನಶಿಸುತ್ತಿರುವ ನೀರಿನ ಜ್ಞಾನ' ಪುಸ್ತಕವನ್ನು 'ಪ್ರಜಾವಾಣಿ' ಸಮೂಹದ ಪತ್ರಿಕೆಗಳ ಸಂಪಾದಕ ಕೆ.ಎನ್.ಶಾಂತಕುಮಾರ್ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಅಕ್ಷರ ಫೌಂಡೇಷನ್ ಅಧ್ಯಕ್ಷರಾದ ರೋಹಿಣಿ ನಿಲೇಕಣಿ, ಸಾಹಿತಿ ಯು.ಆರ್.ಅನಂತಮೂರ್ತಿ ಮತ್ತು ಸಿಡಿಎಲ್ ಸಂಸ್ಥೆಯ ಸಂಸ್ಥಾಪಕಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕಿ ಶಾಂಗೊನ್ ದಾಸ್ ಗುಪ್ತ ಅವರೂ ಇದ್ದಾರೆ.

# ಜಲ ರಕ್ಷಣೆ ಪ್ರಚಾರ: ಪತ್ರಿಕೆಗಳಿಗೆ ಕರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನೀರಿನ ಸಮಸ್ಯೆ, ಸಂರಕ್ಷಣೆ ಮತ್ತು ಮಿತ ಬಳಕೆಯ ಬಗ್ಗೆ ಪತ್ರಿಕೆಗಳು ಮಹತ್ತರ ಪಾತ್ರ ವಹಿಸಬೇಕು' ಎಂದು ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ತಿಳಿಸಿದರು.

ಕಮ್ಯುನಿಕೇಷನ್ ಫಾರ್ ಡೆವಲಪ್‌ಮೆಂಟ್ ಅಂಡ್ ಲರ್ನಿಂಗ್ (ಸಿಡಿಎಲ್) ಸ್ವಯಂ ಸೇವಾ ಸಂಸ್ಥೆ, ಜಲ ಸಂರಕ್ಷಣಾ ದಿನಾಚರಣೆ ಅಂಗವಾಗಿ ಬುಧವಾರ ನಯನ ಸಭಾಂಗಣದಲ್ಲಿ ಏರ್ಪಡಿಸಿದ್ದ 'ನಶಿಸುತ್ತಿರುವ ನೀರಿನ ಜ್ಞಾನ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಶಿಸುತ್ತಿರುವ ನೀರಿನ ಬಗ್ಗೆ ಎಲ್ಲ ವರ್ಗದ ಜನರಿಗೂ ಮನ ತಟ್ಟುವಂತೆ ಪತ್ರಕರ್ತರು ಸರಳವಾಗಿ ಬರೆಯಬೇಕು' ಎಂದು ಕರೆ ನೀಡಿದ ಅವರು, 'ಜಾಗತೀಕರಣದಿಂದ ಹೊಸ ತಂತ್ರ ಜ್ಞಾನ ಬರುತ್ತಿದೆ ನಿಜ. ಆದರೆ ನೀರು ನಿಧಾನವಾಗಿ ಮಾಯವಾಗುತ್ತಿದೆ. ಎಲ್ಲಾ ಇದ್ದು ನೀರಿಲ್ಲದಿದ್ದರೆ ಏನು ಪ್ರಯೋಜನ' ಎಂದು ಪ್ರಶ್ನಿಸಿದರು.

**'ಬಾವಿ ಕಟ್ಟೆಯೇ ಸ್ಫೂರ್ತಿ':** 'ನೀರಿಲ್ಲದೆ ಬದುಕಿಲ್ಲ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ-ನೀರಿಲ್ಲದಿದ್ದರೆ ನಾನು ಸಾಹಿತಿಯೂ ಆಗುತ್ತಿರಲಿಲ್ಲ. ನಾನು ಬರವಣಿಗೆ ಆರಂಭಿಸಿದ್ದು ಊರಿನ ಬಾವಿಕಟ್ಟೆ ಬದಿಯಲ್ಲಿ. ಬಿಂದಿಗೆ ಹಿಡಿದು ಬರುತ್ತಿದ್ದ ಹೆಂಗಸರ ಸುಖ-ದುಃಖ, ಅಮ್ಮನ ಹಿತವಚನ, ಯುವತಿಯರ ಕನಸು... ಎಲ್ಲವೂ ನೀರು ಸೇದುವಾಗ ಮಾತುಗಳಾಗಿ ನನ್ನ ಕಿವಿ ಸೇರುತ್ತಿತ್ತು. ನನ್ನ ಬರವಣಿಗೆಗೆ ಇದೇ ಸ್ಫೂರ್ತಿ' ಎಂದರು.

**'ನಮ್ಮನ್ನು ಬೆಳೆಸಿದ ಪತ್ರಿಕೆ':** 'ಕನ್ನಡದ ಹಲವು ಸಾಹಿತಿಗಳನ್ನು ಬೆಳೆಸಿದ, ಪ್ರೋತ್ಸಾಹಿಸಿದ ಕೀರ್ತಿ **'ಪ್ರಜಾವಾಣಿ'** ಗೆ ಸಲ್ಲಬೇಕು. ಇವತ್ತಿಗೂ ಪತ್ರಿಕೆಯ ಜನಪರ ಧೋರಣೆ ಬದಲಾಗಿಲ್ಲ. ಹೀಗಾಗಿ ಜನರ ವಿಶ್ವಾಸ ಮತ್ತು ಗೌರವಕ್ಕೆ ಪತ್ರಿಕೆ ಪಾತ್ರವಾಗಿದೆ' ಎಂದು ಅವರು ಬಣ್ಣಿಸಿದರು.

'ಬಂಡವಾಳ ಹಾಕಿ ಪತ್ರಿಕೆ ಆರಂಭಿಸುವ ಯಾರೇ ಆದರೂ ಲಾಭ ನಿರೀಕ್ಷೆ ಮಾಡುತ್ತಾರೆ ನಿಜ. ಆದರೆ **'ಪ್ರಜಾವಾಣಿ'** ವ್ಯಾಪಾರಕ್ಕಷ್ಟೇ ಸೀಮಿತವಾದ ಪತ್ರಿಕೆ ಅಲ್ಲ. ನನ್ನ ಮಾತಿಗೆ ಪತ್ರಿಕೆಯ ಜನಪ್ರಿಯತೆಯೇ ಸಾಕ್ಷಿ' ಎಂದ ಅವರು, ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ 'ಜಲಸಂಪನ್ಮೂಲ ಚಿತ್ರಣ ಮಾಲಿಕೆ'ಯನ್ನು, ಸಾಂದರ್ಭಿಕ ಲೇಖನಗಳೆಂದು ಶ್ಲಾಘಿಸಿದರು.

**'ನೀರು ಜೀವನಾಧಾರ':** 'ನೀರು ಜೀವನಾಧಾರ. ನೀರಿಲ್ಲವಾದರೆ ಅಭಿವೃದ್ಧಿ ಇಲ್ಲ. ನಾಗರಿಕತೆ ಇಲ್ಲ. ಈಗ ನೀರಿಗೆ ಅಪಾಯ ಬಂದಿದೆ; ಅಭಾವ ಬಂದಿದೆ. ಮನುಕುಲಕ್ಕೆ ಇದು ಅಪಾಯದ ಮುನ್ಸೂಚನೆ. ಆದ್ದರಿಂದ ನೀರನ್ನು ಮಿತವಾಗಿ ಬಳಸುವ ಮೂಲಕ ನಾವು ಎಚ್ಚೆತ್ತುಕೊಳ್ಳಬೇಕು' ಎಂದು **'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್'** ಪತ್ರಿಕೆಗಳ ಸಂಪಾದಕ ಕೆ.ಎನ್. ಶಾಂತಕುಮಾರ್ ಕಿವಿಮಾತು ಹೇಳಿದರು.

'ಜಲಸಂರಕ್ಷಣೆ ಬಗ್ಗೆ ಪತ್ರಕರ್ತರಿಗೆ ಅರಿವು ಮೂಡಿಸಿ, ತನ್ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿರುವ ಸಿಡಿಎಲ್ ಸಂಸ್ಥೆ ಉತ್ತಮ ಕೆಲಸ ಮಾಡುತ್ತಿದೆ' ಎಂದ ಅವರು, 'ಹನಿ ನೀರನ್ನೂ ಮರುಬಳಕೆ ಮಾಡುವಂತಾಗಬೇಕು. ಈ ಜಲಾಂದೋಲನಕ್ಕಾಗಿ ಜನಾಂದೋಲನ ಆಗಬೇಕು' ಎಂದು ಕರೆ ನೀಡಿದರು.

**'ಎಷ್ಟು ಸರಿ?':** ಅಕ್ಷರ ಫೌಂಡೇಷನ್, ಅರ್ಘ್ಯಮ್ ಮತ್ತು ಪ್ರಥಮ್ ಬುಕ್ಸ್ ಸಂಸ್ಥೆಯ ಅಧ್ಯಕ್ಷರಾದ ರೋಹಿಣಿ ನಿಲೇಕಣಿ ಮಾತನಾಡಿ, 'ಕಾವೇರಿ ನೀರನ್ನು ಕೋಟ್ಯಂತರ ರೂ. ಖರ್ಚು ಮಾಡಿ ಬೆಂಗಳೂರಿಗೆ ತರುತ್ತಿದ್ದೇವೆ. ಅದನ್ನು ಚೆನ್ನಾಗಿ ಬಳಕೆ ಮಾಡಿಕೊಂಡು-ಕೊಳಚೆ ನೀರನ್ನು ಮತ್ತೆ ಅಲ್ಲಿಗೇ ಸೇರಿಸುತ್ತಿದ್ದೇವೆ. ಇದು ಎಷ್ಟು ಸರಿ?' ಎಂದು ಪ್ರಶ್ನಿಸಿದರು.

'ಬೆಂಗಳೂರಿಗೆ ಬೇಕಾಗಿರುವ ನೀರನ್ನು ಇಲ್ಲಿಂದಲೇ ಪಡೆಯಬಹುದು. ನೀರು ಸಂರಕ್ಷಣೆ, ಮಳೆ ಸಂಗ್ರಹಣೆಯಿಂದ ಇದನ್ನು ಸಾಧಿಸಬಹುದು' ಎಂದು ಅಭಿಪ್ರಾಯಪಟ್ಟರು. ಸಿಡಿಎಲ್ ಸಂಸ್ಥೆಯ ಸಂಸ್ಥಾಪಕಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕಿ ಶಾಂಗೊನ್ ದಾಸ್ ಗುಪ್ತ, ಪತ್ರಕರ್ತರಿಗೆ ನೀರಿನ ಬಗ್ಗೆ ತಮ್ಮ ಸಂಸ್ಥೆ ಜಾಗೃತಿ ಮೂಡಿಸುತ್ತಿರುವ ಬಗ್ಗೆ ವಿವರಿಸಿದರು.

www.rohininilekani.org